www.ecourtsindia.com



**22 ನೇ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ ಬೆಂಗಳೂರು**

**ಸಿ.ಸಿ.ನಂ: 19092 / 2023**

**ಡಿಡಬ್ಲ್ಯೂ -1**

| | |
|---|---|
| **ಸಾಕ್ಷಿಯ ಹೆಸರು** | **ಮೋಹನ್ ರಾಜ್** |
| **ತಂದೆಯ ಹೆಸರು** | **ದಿಃ ಸಿದ್ದಯ್ಯ** |
| **ವಯಸ್ಸು** | **51 ವರ್ಷ** |
| **ಉದ್ಯೋಗ** | **ಇಲ್ಲ** |
| **ವಾಸ** | **ಶ್ರೀನಗರ** |

**ಸಾಕ್ಷಿಗೆ ದಿನಾಂಕ 17.06.2025 ರಂದು ಪ್ರಮಾಣ ವಚನ್ನು ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಮಾನ್ಯ ವಕೀಲರಿಂದ:**

ಸುಮಾರು 12 ವರ್ಷದ ಹಿಂದೆ ನಾನು ಹಾಗೂ ನನ್ನ ಹೆಂಡತಿ ದೂರುದಾರರ ಮನೆಗೆ ಹೋಗಿ ರೂ 50 ಸಾವಿರ ನಗದು ರೂಪದಲ್ಲಿ ಕೈ ಸಾಲ ಪಡೆದಿರುತ್ತೇವೆ. ಪಡೆದ ರೂ 50 ಸಾವಿರ ಹಣವನ್ನು ನಾನು ನನ್ನ ಹೆಂಡತಿಯ ಮೂಲಕ 2 ತಿಂಗಳಿನಲ್ಲೇ ನಗದು ರೂಪದಲ್ಲಿ ಮರುಪಾವತಿಸಿರುತ್ತೇನೆ. ನನ್ನ ಹೆಂಡತಿ ಈಗ ಮೂರು ವರ್ಷದ ಹಿಂದೆ ಅಂದರೆ ದಿಃ 12.05.2021 ರಂದು ಕೋವಿಡ್ ಗೆ ತುತ್ತಾಗಿ ನಿಧನರಾಗಿರುತ್ತಾರೆ. ದೂರುದಾರರಿಂದ ನಾನು ರೂ 50

This is a True Copy of the Court Records Online. Authenticated @ districts.ecourtsindia.com/cnr/KABC030339492023/truecopy/order-3.pdf

ಸಾವಿರ ಸಾಲ ಪಡೆದುಕೊಂಡಾಗ, ದೂರುದಾರರು ನನ್ನಿಂದ ಸಹಿ ಮಾಡಿದ ಖಾಲಿ ಚೆಕ್ಕನ್ನು ಭದ್ರತೆಯ ಸಲುವಾಗಿ ಪಡೆದಿರುತ್ತಾರೆ. ಹಣ ಮರುಪಾವತಿಸಿದ ನಂತರ ನನ್ನ ಹೆಂಡತಿಯೂ ಪಡೆದ ಚೆಕ್ಕನ್ನು ಹಿಂತಿರುಗಿಸುವಂತೆ ಕೇಳಿದರು ಕೂಡಾ ದೂರುದಾರರು ಹಿಂತಿರುಗಿಸಿರುವುದಿಲ್ಲ. ಹಾಲಿ ಪಿರ್ಯಾದಿಯನ್ನು ವಜಾಗೊಳಿಸಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ದೂರುದಾರರ ಪರ ವಕೀಲರಿಂದಃ**

ದೂರುದಾರರು ನನಗೆ ನನ್ನ ಹೆಂಡತಿಯ ಚಿಕ್ಕಮ್ಮರಾದ ಲಕ್ಷ್ಮೀ ರವರ ಮೂಲಕ ಪರಿಚಯ. ಈ ಸುಮಾರು ಒಂದು ವರ್ಷದಿಂದ ನಾನು ಶ್ರೀ ನಗರದಲ್ಲಿ ವಾಸವಿದ್ದೇನೆ. ಹಾಲಿ ಪಿರ್ಯಾದಿಯಲ್ಲಿ ವಿವರಿಸಿರುವ ವಿಳಾಸದಲ್ಲಿ ನಾನು ಮೊದಲು ವಾಸ ಮಾಡುತ್ತಿದ್ದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೂ 50 ಸಾವಿರ ಹೊರತುಪಡಿಸಿ ನಾನು ಆಗಾಗ ದೂರುದಾರಿಂದ ಮನೆಯ ಖರ್ಚಿನ ಸಲುವಾಗಿ ಆಗಾಗ ಕೈ ಸಾಲ ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ರೂ 50 ಸಾವಿರ ಮರುಪಾವತಿಸಿದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC030339492023/truecopy/order-3.pdf

ವಿವಾದಿತ ಚೆಕ್ಕನ್ನು ಹಿಂತಿರುಗಿಸುವಂತೆ ನಾನು ಬರವಣಿಗೆ ಮೂಲಕ ಕೇಳಿರುವುದಿಲ್ಲ ಸಾಕ್ಷಿ ಮುಂದುವರೆದು ನಂಬಿಕೆ ಇದ್ದ ಕಾರಣ ನಾನು ಹಾಗೇ ಸುಮ್ಮನೆ ಇದ್ದೆ ಎಂದು ನುಡಿಯುತ್ತಾರೆ. ಆ ರೀತಿ ತಿಳುವಳಿಕೆ ಪತ್ರದ ಮೂಲಕ ಚೆಕ್ಕನ್ನು ಪಡೆದುಕೊಳ್ಳಲು ತೊಂದರೆ ಇಡಿರಲಿಲ್ಲ.

ವಿವಾದಿತ ಚೆಕ್ಕು ಹಾಗೂ ಸಹಿಯು ನನ್ನದೇ ಎಂದರೆ ಸರಿ. ಸಾಕ್ಷಿ ಮುಂದುವರೆದು ಚೆಕ್ಕಿನ ಖಾತೆಯು 12 ವರ್ಷದ ಹಿಂದೆಯೇ ವ್ಯವಹಾರ ನಿಂತು ಹೋಗಿರುತ್ತದೆ ಎಂದು ನುಡಿಯುತ್ತಾರೆ. 2022 ರ 12 ನೇ ತಿಂಗಳದಂದು ನಾನು ದೂರುದಾರರಿಂದ ರೂ 3 ಲಕ್ಷ ಕೈ ಸಾಲ ಪಡೆದಿರುತ್ತೇನೆ ಹಾಗೂ ಅದರ ತಿರುವಳಿಗಾಗಿ ವಿವಾದಿತ ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ವಿವಾದಿತ ಚೆಕ್ಕು ಸಿಟಿಎಸ್ ಚೆಕ್ಕಾದ ಕಾರಣ ಅದು 12 ವರ್ಷದ ಪೂರ್ವದ ಚೆಕ್ಕು ಇರುವುದಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರಿಗೆ ಪಡೆದ ರೂ 3 ಲಕ್ಷ ಮರುಪಾವತಿಸಲು ಬಾದ್ಯಸ್ಥರಾಗಿದ್ದರು ಕೂಡಾ ಉದ್ದೇಶ ಪೂರ್ವಕವಾಗಿ ಖಾತೆ ಬಂದಾದ ಚೆಕ್ಕನ್ನು ಕೊಟ್ಟು ಅವರಿಗೆ

This is a True Copy of the Court Records Online. Authenticated @ districts.ecourtsindia.com/cnr/KABC030339492023/truecopy/order-3.pdf

www.ecourtsindia.com

ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ತಿಳುವಳಿಕೆ ಪತ್ರವೂ ಜಾರಿ ಆಗಿದ್ದರೂ ಕೂಡಾ ಜಾರಿ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ನನ್ನ ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ**

**22 ನೇ ಅಪರ ಮು ಮ ದಂ, ಬೆಂಗಳೂರು ನಗರ.**

This is a True Copy of the Court Records Online. Authenticated @ districts.ecourtsindia.com/cnr/KABC030339492023/truecopy/order-3.pdf